ಶ್ರೀ ಗುರುಭ್ಯೋನಮಃ ಹರಿಃ ಓಂ

# ಮಾಂಧಾತ ಚಕ್ರವರ್ತಿ
## (ಭಾಗವತದಿಂದ ಆಯ್ದ ವಿಷಯ)

ಲೇಖಕರು : ಶ್ರೀ ಪಾಂಡುರಂಗಾಚಾರ್ಯ
ಶ್ರೀನಿವಾಸಾಚಾರ್ಯ ವಾಯಿಕರ್, ಬೆಂಗಳೂರು.

ಶ್ರೀ ಪರಮಾತ್ಮನ ಮಕ್ಕಳು ಬ್ರಹ್ಮದೇವರು. ಬ್ರಹ್ಮದೇವರ ಮಕ್ಕಳು ಮರೀಚಿ ಋಷಿಗಳು. ಮರೀಚಿ ಋಷಿಗಳ ಮಕ್ಕಳು ಕಶ್ಯಪರು. ಕಶ್ಯಪರಿಗೆ ಅದಿತಿ ದೇವಿಯಲ್ಲಿ ವಿವಸ್ವಾನ್ ಎಂಬ ಸೂರ್ಯನು ಜನಿಸಿದನು. ಸೂರ್ಯನಿಗೆ ಸಂಜ್ಞಾದೇವಿಯಲ್ಲಿ ಶ್ರಾದ್ಧದೇವನೆಂಬ ಮಗನು ಹುಟ್ಟಿದನು. ಶ್ರಾದ್ಧದೇವನಿಗೆ ಶ್ರದ್ಧಾದೇವಿಯಲ್ಲಿ ಇಕ್ಷ್ವಾಕು ........... ಮುಂತಾದ ಹತ್ತು ಮಕ್ಕಳು ಹುಟ್ಟಿದರು.

ಈ ಮಕ್ಕಳಾಗುವ ಮೊದಲೇ ಮನುವಿಗೆ ಮಕ್ಕಳಾಗಬೇಕೆಂದು ವಸಿಷ್ಠರು ಮಿತ್ರಾವರುಣ ದೇವತಾಕ ಇಷ್ಟಿಯನ್ನು ಮಾಡಿದರು. ಅಲ್ಲಿ ಮನುವಿನ ಹೆಂಡತಿಯು ಹೋತೃ ಎಂಬ ಋತ್ವಿಕರ ಬಳಿಗೆ ಹೋಗಿ ನಮಸ್ಕರಿಸಿ, ನೀವು ಆಹುತಿಯನ್ನು ಹಾಕುವಾಗ ಹೆಣ್ಣು ಮಗುವು ಹುಟ್ಟಲಿ ಎಂದು ಸಂಕಲ್ಪ ಮಾಡಿ ಎಂದು ಹೇಳಿದರು. ಹೋತೃವು ಹಾಗೆಯೇ ಮಾಡಿದ್ದಕ್ಕಾಗಿ ಒಬ್ಬ ಹೆಣ್ಣು ಮಗಳು ಹುಟ್ಟಿದಳು. ಆಕೆಯ ಹೆಸರು ಇಲಾ. ಅದನ್ನು ನೋಡಿ ಮನುವಿಗೆ ಸಂತೋಷವಾಗಲಿಲ್ಲ.

ಬುಧನಿಂದ ಸ್ತ್ರೀಯಾದ ಸುದ್ಯುಮ್ನನಲ್ಲಿ ಪುರುರುವ ಎಂಬ ಮಗ ಹುಟ್ಟಿದನು. ಮನುವಿಗೆ ನಾಭಾಗ ಎಂಬ ಮಗನು ಕೊನೆಯವನು. ನಾಭಾಗನ ಮಗ ಅಂಬರೀಷ.

ಒಂದು ಸಮಯದಲ್ಲಿ ಮನುವು ಸೀನುವಾಗ ಅವನ ಮೂಗಿನಿಂದ ಇಕ್ಷ್ವಾಕು ಹುಟ್ಟಿದನು. ಇಕ್ಷ್ವಾಕು ರಾಜನಿಗೆ ವಿಕುಕ್ಷಿ ಮೊದಲಾದ ೧೦೦ ಜನ ಮಕ್ಕಳು.

ವಿಕುಕ್ಷಿಯ ಮಗ ಪುರಂಜಯ. ಅದೇ ವಂಶದಲ್ಲಿ ಕುವಲಯಾಶ್ವ ಎಂಬ ರಾಜನು ಬಂದನು. ಈತನು ಹರಿಯ ಆವೇಶ ಬಲದಿಂದ ರಾಕ್ಷಸರನ್ನು ಕೊಂದಿದ್ದಕ್ಕೆ ದುಂಧುಮಾರ ಎಂಬ ಹೆಸರು ಬಂದಿತು.

ಸ್ವಲ್ಪ ಕಾಲಾನಂತರ ಅದೇ ವಂಶದಲ್ಲಿ ಯವನಾಶ್ವ ಎಂಬ ರಾಜನು ರಾಜ್ಯವಾಳಿದನು. ಅವನಿಗೆ ೧೦೦ ಜನ ಪತ್ನಿಯರು. ಆದರೂ ಮಕ್ಕಳಾಗಲಿಲ್ಲ. ಇದರಿಂದ ರಾಜನು ವೈರಾಗ್ಯ ಹೊಂದಿ ಕಾಡಿಗೆ ಹೋದನು. ಅಲ್ಲಿ ವಾಸವಾಗಿದ್ದ ಋಷಿಗಳು ಇವನ ಮೇಲೆ ಕರುಣೆಯಿಂದ ಇವನಿಗೆ ಒಬ್ಬ ಮಗ ಹುಟ್ಟುವಂತೆ ಇಷ್ಟಿ ಮಾಡಿದರು. ಆ ಇಷ್ಟಿಯಲ್ಲಿ ಒಂದು ಕನಸಿನಲ್ಲಿ ನೀರನ್ನು ಅಭಿಮಂತ್ರಿಸಿ, ಮರುದಿನ ಪ್ರಾತಃ ಕಾಲ ರಾಜನ ಪತ್ನಿಗೆ ಕೊಡಬೇಕೆಂದು ಇಟ್ಟಿದ್ದರು. ರಾಜನಿಗೆ ರಾತ್ರಿ ಕಾಲದಲ್ಲಿ ತುಂಬ ನೀರಡಿಕೆಯಾಯಿತು. ಋಷಿಗಳೆಲ್ಲರು ಮಂತ್ರಗಳನ್ನು ಹೇಳಿದ ಶ್ರಮದಿಂದ ಅಲ್ಲಿಯೇ ಮಲಗಿ ನಿದ್ರೆ ಹೋಗಿದ್ದರು. ರಾಜನು ನೀರಿಗಾಗಿ ಹುಡುಕಿ ಕಲಶದಲ್ಲಿದ್ದ (ಅಭಿಮಂತ್ರಿಸಿದ) ನೀರನ್ನು ಪೂರ್ಣ ಕುಡುದುಬಿಟ್ಟನು. ಮರುದಿನ ಕಲಶಪಾತ್ರೆಯಲ್ಲಿ ನೀರಿರಲಿಲ್ಲ. ಋಷಿಗಳು ಕಲಶಪಾತ್ರೆಯಲ್ಲಿ ನೀರು ರಹಿತವಾಗಿರುವುದನ್ನು ಕಂಡು, ಯಾರು ಈ ಅಭಿಮಂತ್ರಿಸಿದ ನೀರನ್ನು ಕುಡಿದರು ಎಂದು ಅಲ್ಲಿದ್ದವರನ್ನೆಲ್ಲ ವಿಚಾರಿಸಿದರು. ರಾಜನು ನಾನೇ ಕುಡಿದೆನೆಂದು ಹೇಳಿದನು.

ಋಷಿಗಳು ಭಗವಂತನ ಇಚ್ಛೆ ಎಂದು ಸುಮ್ಮನಾದರು. ಋಷಿಗಳ ಮಂತ್ರವು ವ್ಯರ್ಥವಾಗಲಿಲ್ಲ. ಮುಂದೆ ರಾಜನ ಹೊಟ್ಟೆಯಲ್ಲಿಯೇ ಮಗು ಬೆಳೆಯಿತು. ಮುಂದೆ ಪ್ರಸವ ಕಾಲದಲ್ಲಿ

ಹೊಟ್ಟೆಯ ಒಂದು ಪಾರ್ಶ್ವವನ್ನು ಸೀಳಿಕೊಂಡು ಮಗು ಹೊರಬಂದಿತು. ಆದರೂ ಭಗವದಿಚ್ಛೆಯಿಂದ ಹುಟ್ಟಿದ ಮಗುವೂ ಸಾಯಲಿಲ್ಲ, ರಾಜನೂ ಸಾಯಲಿಲ್ಲ. ಅದು ಅಳತೊಡಗಿತು. "ಈ ಮಗುವು ಅಳುತ್ತದಲ್ಲ, ಯಾವುದನ್ನು ಕುಡಿಯಲಿ" ಎಂದು ಜನರು ಮಾತನಾಡಿಕೊಂಡರು.

ಆಗ ಅಲ್ಲಿಗೆ ಬಂದಿದ್ದ ಇಂದ್ರದೇವರು "ನನ್ನನ್ನು ಕುಡಿಯುವನು" ಎಂದು ಹೇಳಿ ಮಗುವಿನ ಬಾಯೊಳಗೆ ಕೈ ಬೆರಳನ್ನು ಇಟ್ಟರು. ಅವರ ಕೈ ಬೆರಳಿನಿಂದ ಬಂದಂಥ ಅಮೃತ ಧಾರೆಯನ್ನೇ ಮಗುವು ಚೀಪಿತು. ಹೀಗೆ ಇಂದ್ರದೇವರು "ಮಾಂ ದಾಸ್ಯತಿ" ಎಂದು ಹೇಳುವುದರಿಂದ "ಮಾಂಧಾತ" ಎಂಬ ಹೆಸರು ಬಂದಿತು.

ಇಂದ್ರ ದೇವರು ಆ ಮಗುವಿಗೆ "ತ್ರಸದಸ್ಯು" ಎಂಬ ಹೆಸರನ್ನು ಇಟ್ಟರು. ಅದರಿಂದ ರಾವಣ ಮೊದಲಾದ ದಸ್ಯುಗಳು ಅಂದರೆ ದುಷ್ಟರು ಭಯ ಪಡುವ ಕಾರಣ ಹೆಸರು ಸಾರ್ಥಕವಾಯಿತು.

ಇಲ್ಲಿ ನಾವು ಗಮನಿಸಬೇಕಾದ ವಿಶೇಷಾಂಶವೇನೆಂದರೆ ಮಾಂಧಾತ ರಾಜನ ಜನನ ರೀತಿ ಅತ್ಯಂತ ಆಶ್ಚರ್ಯಕರವಾಗಿದೆ. ಋತ್ವಿಕರು ಉಚ್ಛರಿಸಿದ ಮಂತ್ರ ಸಾಮರ್ಥ್ಯವನ್ನು ತಿಳಿಸುತ್ತದೆ. ಮಾಂಧಾತ ರಾಜನು ತಾಯಿಯ ಗರ್ಭದಿಂದ ಬರಲಿಲ್ಲ. ತಂದೆಯ ಹೊಟ್ಟೆಯಲ್ಲೆ ಬೆಳೆದು ಅಲ್ಲಿಂದ ಹೊರಬಂದನು. ಇಬ್ಬರೂ ಬದುಕಿದರು. ಸಕಾಲದಲ್ಲಿ ಮಾಂಧಾತನು ಚಕ್ರವರ್ತಿಯಾದನು. ಮಾಂಧಾತ ರಾಜನು ಚಕ್ರವರ್ತಿಯಾಗಿ ಭೂಮಂಡಲವನ್ನು ಆಳಿದನು. ಅನೇಕ ಯಜ್ಞಗಳನ್ನು ಮಾಡಿದನು. ಈತನು ಶಶಿಬಿಂದು ರಾಜನ ಮಗಳಾದ ಬಿಂದುಮತಿಯಲ್ಲಿ ಪುರುಕುತ್ಸ, ಅಂಬರೀಷ, ಮುಚುಕುಂದ ಎಂಬ ೩ ಗಂಡುಮಕ್ಕಳನ್ನು ಪಡೆದನು. ಇದಲ್ಲದೆ ೫೦ ಹೆಣ್ಣು ಮಕ್ಕಳು ಹುಟ್ಟಿದರು.

ಕಾಲಾಂತರದಲ್ಲಿ ಅಂಥ ಒಂದು ಸಂದರ್ಭ ಒದಗಿದ್ದರಿಂದ ಈ ೫೦ ಹೆಣ್ಣು ಮಕ್ಕಳನ್ನು ಸೌಭರಿ ಋಷಿಗಳಿಗೆ ಮದುವೆ ಮಾಡಿ

ಕೊಟ್ಟರು.